ಅಧ್ಯಾಯ–7

ವಿದೇಶಿ ವ್ಯಾಪಾರ

ಈ ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರಿಸಿ. (ಒಂದು ಅಂಕದ ಪ್ರಶ್ನೆಗಳು)

1. ವಿದೇಶಿ ವ್ಯಾಪಾರ ಎಂದರೇನು ?

ಉತ್ತರ: ದೇಶ ದೇಶಗಳ ನಡುವಿನ ವ್ಯಾಪಾರವನ್ನು ವಿದೇಶಿ ವ್ಯಾಪಾರ ಎನ್ನುತ್ತೇವೆ.

2. ಭಾರತದ ರಫ್ತು ಸಂಯೋಜನೆಯ ಅರ್ಥ ತಿಳಿಸಿ.

ಉತ್ತರ : ಭಾರತವು ವಿದೇಶಗಳಿಗೆ ರಫ್ತು ಮಾಡುವ ವಿವಿಧ ಸರಕುಗಳು ಮತ್ತು ಅವುಗಳ ಪ್ರಮಾಣವನ್ನು ತಿಳಿಸುವುದೇ ರಫ್ತು ಸಂಯೋಜನೆ ಅಥವಾ ರಫ್ತು ರಚನೆ.

3. ಭಾರತದ ಅತಿ ದೊಡ್ಡ ರಫ್ತು ವಸ್ತು ಯಾವುದು ?

ಉತ್ತರ : ರತ್ನಗಳು ಮತ್ತು ಆಭರಣಗಳು

4. ಭಾರತದ ಅತಿ ದೊಡ್ಡ ಆಮದು ಸರಕು ಯಾವುದು ?

ಉತ್ತರ : ಪೆಟ್ರೋಲಿಯಂ

5. ಭಾರತದ ಸಂದಾಯ ಬಾಕಿ ಎಂದರೇನು ?

ಉತ್ತರ : ಭಾರತವು ಒಂದು ವರ್ಷದ ಅವಧಿಯಲ್ಲಿ ಇತರೆ ರಾಷ್ಟ್ರಗಳೊಂದಿಗೆ ಮಾಡಿದ ಎಲ್ಲ ಆರ್ಥಿಕ ವ್ಯವಹಾರಗಳ ವ್ಯವಸ್ಥಿತ ದಾಖಲೆ ಪಟ್ಟಿಗೆ ಭಾರತದ ಸಂದಾಯ ಬಾಕಿ ಎನ್ನುತ್ತೇವೆ.

6. ವ್ಯಾಪಾರ ಬಾಕಿ ಎಂದರೇನು ?

ಉತ್ತರ : ದೇಶವು ಒಂದು ವರ್ಷದ ಅವಧಿಯಲ್ಲಿ ಇತರೆ ದೇಶಗಳೊಂದಿಗೆ ಮಾಡಿದ ಕೇವಲ ಸರಕುಗಳ ಆಮದು ಮತ್ತು ರಫ್ತು ವ್ಯವಹಾರಗಳ ವ್ಯವಸ್ಥಿತ ದಾಖಲೆ ಪಟ್ಟಿಗೆ ವ್ಯಾಪಾರ ಬಾಕಿ ಎನ್ನುತ್ತೇವೆ.

7. ಕೊರತೆಯ ಸಂದಾಯ ಬಾಕಿ ಎಂದರೇನು ?

ಉತ್ತರ : ಸಂದಾಯ ಬಾಕಿಯಲ್ಲಿ ರಫ್ತು ಮೌಲ್ಯಕ್ಕಿಂತ ಆಮದು ಮೌಲ್ಯ ಹೆಚ್ಚಾಗಿದ್ದಲ್ಲಿ ಅದನ್ನು ಕೊರತೆಯ ಸಂದಾಯ ಬಾಕಿ ಎನ್ನುತ್ತೇವೆ.

8. ವಿದೇಶಿ ವಿನಿಮಯ ಸಂಗ್ರಹದ ಅರ್ಥ ತಿಳಿಸಿ.
ಉತ್ತರ : ಭಾರತೀಯ ರಿಜರ್ವ್ ಬ್ಯಾಂಕು ತನ್ನಲ್ಲಿ ಹೊಂದಿರುವ ವಿದೇಶಿ ಹಣ, ಚಿನ್ನ ಮತ್ತು SDR ನ ಒಟ್ಟು ಮೌಲ್ಯಕ್ಕೆ ವಿದೇಶಿ ವಿನಿಮಯ ಸಂಗ್ರಹ ಎನ್ನುತ್ತೇವೆ.

9. ವಿದೇಶಿ ವಿನಿಮಯ ಸಂಗ್ರಹದ ಆಮದು ರಕ್ಷಣೆ ಎಂದರೇನು ?
ಉತ್ತರ : ಸದ್ಯದಲ್ಲಿರುವ ವಿದೇಶಿ ವಿನಿಮಯ ಸಂಗ್ರಹದಿಂದ ನಮ್ಮ ಅರ್ಥವ್ಯವಸ್ಥೆಯು ತನ್ನ ಆಮದುಗಳಿಗಾಗಿ ವಾರಗಳು ಅಥವಾ ತಿಂಗಳುಗಳ ವರೆಗೆ ಸಂದಾಯ ಮಾಡಬಹುದಾದ ಸಾಮರ್ಥ್ಯವನ್ನು ವಿದೇಶಿ ವಿನಿಮಯ ಸಂಗ್ರಹದ ಆಮದು ರಕ್ಷಣೆ ಎನ್ನುತ್ತೇವೆ.

10. ರೂಪಾಯಿಯ ಅಪಮೌಲ್ಯ ಎಂದರೇನು ?
ಉತ್ತರ : ವಿದೇಶಿ ಹಣಗಳ ಎದುರು ರೂಪಾಯಿಯ ಮೌಲ್ಯವನ್ನು ಉದ್ದೇಶ ಪೂರ್ವಕವಾಗಿ ಕಡಿತಗೊಳಿಸುವುದು.

11. ರೂಪಾಯಿಯ ಪೂರ್ಣ ಪರಿವರ್ತನೀಯತೆ ಎಂದರೇನು ?
ಉತ್ತರ : ಚಾಲ್ತಿ ಖಾತೆಯಲ್ಲಿ ಗಳಿಸುವ ವಿದೇಶಿ ಹಣವನ್ನು ರೂಪಾಯಿಗೆ ಮತ್ತು ರೂಪಾಯಿಯನ್ನು ವಿದೇಶಿ ಹಣಕ್ಕೆ ಮಾರುಕಟ್ಟೆ ದರದಲ್ಲಿ ಪೂರ್ಣವಾಗಿ ಪರಿವರ್ತಿಸಿಕೊಳ್ಳಲು ಅವಕಾಶ ಮಾಡಿಕೊಡಲಾಗಿದೆ. ಇದಕ್ಕೆ ರೂಪಾಯಿಯ ಪೂರ್ಣ ಪರಿವರ್ತನೀಯತೆ ಎನ್ನುತ್ತೇವೆ.

12. ಆಮದು ಪರ್ಯಾಯತೆ ಎಂದರೇನು ?
ಉತ್ತರ : ಆಮದಾಗುವ ಸರಕುಗಳಿಗೆ ಬದಲಿಯಾಗಿ ಅಂಥದೇ ಸರಕುಗಳನ್ನು ದೇಶದಲ್ಲಿ ಕಡಿಮೆ ಬೆಲೆಯಲ್ಲಿ ಉತ್ಪಾದಿಸುವುದಕ್ಕೆ ಆಮದು ಪರ್ಯಾಯತೆ ಎನ್ನುತ್ತೇವೆ.

13. OECD – ವಿಸ್ತರಿಸಿ.
ಉತ್ತರ : ಆರ್ಥಿಕ ಸಹಕಾರ ಮತ್ತು ಅಭಿವೃದ್ಧಿಗಾಗಿನ ಸಂಘಟನೆ
(Organization for Economic Co operation and Development)

14. SEZ - ವಿಸ್ತರಿಸಿ.
ಉತ್ತರ : ವಿಶೇಷ ಆರ್ಥಿಕ ವಲಯ (Special Economic Zone)

15. ASEAN - ವಿಸ್ತರಿಸಿ
ಉತ್ತರ : ಆಗ್ನೇಯ ಏಷ್ಯಾ ರಾಷ್ಟ್ರಗಳ ಒಕ್ಕೂಟ
(Association for South-East Asian Nations)

16. ಆಮದು ಉದಾರೀಕರಣ ಎಂದರೇನು ?

ಉತ್ತರ : ಆಮದುಗಳ ಮೇಲಿನ ಸರ್ಕಾರದ ಅನಗತ್ಯ ನಿಯಂತ್ರಣ ಮತ್ತು ನಿರ್ಬಂಧಗಳನ್ನು ತೆಗೆದುಹಾಕುವುದಕ್ಕೆ ಆಮದು ಉದಾರೀಕರಣ ಎನ್ನುತ್ತೇವೆ.

<u>ಮುಂದಿನ ಪ್ರಶ್ನೆಗಳಿಗೆ ನಾಲ್ಕೈದು ವಾಕ್ಯಗಳಲ್ಲಿ ಉತ್ತರಿಸಿ. (2 ಅಂಕಗಳ ಪ್ರಶ್ನೆಗಳು)</u>

17. ಭಾರತದ ರಫ್ತುಗಳಲ್ಲಿನ ಪ್ರಾಥಮಿಕ ಸರಕುಗಳನ್ನು ಹೆಸರಿಸಿ.

ಉತ್ತರ : 1. ಕೃಷಿ ಮತ್ತು ಕೃಷಿ ಸಂಬಂಧಿತ ಸರಕುಗಳು : ಕಾಫಿ, ಟೀ, ಹೊಗೆಸೊಪ್ಪು, ಸಾಂಬಾರ ಪದಾರ್ಥಗಳು, ಮೀನು, ಮಾಂಸ, ಹಣ್ಣು, ತರಕಾರಿ ಇತ್ಯಾದಿ.

2. ಅದಿರು ಮತ್ತು ಖನಿಜಗಳು : ಕಬ್ಬಿಣದ ಅದಿರು, ಅಭ್ರಕ, ಇತ್ಯಾದಿ.

18. ಭಾರತದಿಂದ ರಫ್ತಾಗುತ್ತಿರುವ ಯಾವುದಾದರೂ ನಾಲ್ಕು ತಯಾರಿಕಾ ಸರಕುಗಳನ್ನು ಹೆಸರಿಸಿ.

- ✓ರತ್ನಗಳು ಮತ್ತು ಆಭರಣಗಳು,
- ✓ಜವಳಿ ಮತ್ತು ಸಿದ್ಧ ಉಡುಪು,
- ✓ಕರಕುಶಲ ವಸ್ತುಗಳು,
- ✓ಇಂಜಿನಿಯರಿಂಗ್ ಸರಕುಗಳು
- ✓ರಾಸಾಯನಿಕ ಸರಕುಗಳು, ಇತ್ಯಾದಿ.

19. ಸಂದಾಯ ಬಾಕಿಯ ಎರಡು ಖಾತೆಗಳಾವುವು?

ಉತ್ತರ : * ಚಾಲ್ತಿ ಖಾತೆ
* ಬಂಡವಾಳ ಖಾತೆ

20. ಚಾಲ್ತಿ ಖಾತೆ ಮತ್ತು ಬಂಡವಾಳ ಖಾತೆಗಳ ಅರ್ಥವ್ಯತ್ಯಾಸ ತಿಳಿಸಿ.

ಉತ್ತರ : ದೇಶದ ಸರಕು ಮತ್ತು ಸೇವೆಗಳ ಒಟ್ಟು ರಫ್ತು ಮೌಲ್ಯ ಮತ್ತು ಆಮದು ಮೌಲ್ಯಗಳ ದಾಖಲೆಯನ್ನು ಒಳಗೊಂಡುದೇ ಚಾಲ್ತಿ ಖಾತೆ.

ದೇಶವು ವಿದೇಶಗಳೊಂದಿಗೆ ನಡೆಸುವ ಎಲ್ಲ ದೀರ್ಘಾವಧಿ ಮತ್ತು ಅಲ್ಪಾವಧಿ ಹಣಕಾಸಿನ ವ್ಯವಹಾರಗಳನ್ನು ದಾಖಲಿಸುವುದೇ ಬಂಡವಾಳ ಖಾತೆ.

21. ಚಾಲಿ ಖಾತೆಯ ರಚನೆಯನ್ನು ತಿಳಿಸಿ

ಉತ್ತರ : ಚಾಲ್ತಿ ಖಾತೆಯು ಎರಡು ಉಪ ವಿಭಾಗಗಳನ್ನು ಹೊಂದಿದೆ. ಅವುಗಳೆಂದರೆ,

1. ಸರಕುಗಳ ಖಾತೆ (ಗೋಚರಗಳ ಖಾತೆ)

2. ಸೇವೆಗಳ ಖಾತೆ (ಅಗೋಚರಗಳ ಖಾತೆ)

22. ವ್ಯಾಪಾರ ಬಾಕಿ ಮತ್ತು ಚಾಲ್ತಿ ಖಾತೆ ಬಾಕಿಗಳ ನಡುವಿನ ಭಿನ್ನತೆ ತಿಳಿಸಿ.

ಉತ್ತರ : ದೇಶವು ಒಂದು ವರ್ಷದ ಅವಧಿಯಲ್ಲಿ ವಿದೇಶಗಳೊಡನೆ ಮಾಡಿದ ಕೇವಲ ಸರಕುಗಳ ಆಮದು ಮತ್ತು ರಫ್ತು ವ್ಯವಹಾರಗಳ ದಾಖಲೆ ಪಟ್ಟಿಗೆ ವ್ಯಾಪಾರ ಬಾಕಿ ಎನ್ನುತ್ತೇವೆ.

ಚಾಲ್ತಿ ಖಾತೆಯಲ್ಲಿರುವ ಎಲ್ಲ ಸರಕು ಮತ್ತು ಸೇವೆಗಳ ಆಮದು ಮತ್ತು ರಫ್ತು ವ್ಯವಹಾರಗಳನ್ನು ದಾಖಲಿಸುವ ಪಟ್ಟಿಗೆ ಚಾಲ್ತಿ ಖಾತೆ ಬಾಕಿ ಎನ್ನುತ್ತೇವೆ.

23. ಸಂದಾಯ ಬಾಕಿಯ ವಿಧಗಳನ್ನು ತಿಳಿಸಿ.

ಉತ್ತರ :

* ಉಳಿತಾಯ ಸಂದಾಯ ಬಾಕಿ.
* ಕೊರತೆಯ ಸಂದಾಯ ಬಾಕಿ.
* ಸಮತೋಲನ ಸಂದಾಯ ಬಾಕಿ.

24. WTO ದ ನಾಲ್ಕು ಬಹುಮುಖ್ಯ ಕಾರ್ಯಗಳನ್ನು ಗುರುತಿಸಿ.

❖ ಗ್ಯಾಟ್‌ನ ಉರುಗ್ವೆ ಸುತ್ತಿನ ಮಾತುಕತೆಗಳಿಗೆ ಸಂಬಂಧಿಸಿದ ಎಲ್ಲ ಬಹುಪಕ್ಷೀಯ ವ್ಯಾಪಾರ ಒಪ್ಪಂದಗಳನ್ನು ಜಾರಿಗೆ ತರುವುದು.

❖ ಸದಸ್ಯ ರಾಷ್ಟ್ರಗಳ ಬಹುಪಕ್ಷೀಯ ಒಪ್ಪಂದಗಳಿಗೆ ಸಂಬಂಧಿಸಿದ ಎಲ್ಲ ಮಾತುಕತೆಗಳಿಗೆ ವೇದಿಕೆಯಾಗಿ ಕೆಲಸ ಮಾಡುವುದು.

❖ ಅಂತರರಾಷ್ಟ್ರೀಯ ವ್ಯಾಪಾರಕ್ಕೆ ಸಂಬಂಧಿಸಿದ ಭಿನ್ನಾಭಿಪ್ರಾಯ ಮತ್ತು ತಂಟೆ ತಕರಾರುಗಳನ್ನು ಬಗೆಹರಿಸುವುದು ಹಾಗೂ ವ್ಯಾಪಾರಕ್ಕೆ ಸಂಬಂಧಿಸಿದ ನೀತಿ–ನಿಯಮಗಳನ್ನು ಕಾರ್ಯರೂಪಕ್ಕೆ ತರುವುದು.

❖ ವಿಶ್ವ ಆರ್ಥಿಕ ನೀತಿಯ ಯಶಸ್ವಿಗಾಗಿ ಅಂತರರಾಷ್ಟ್ರೀಯ ಹಣಕಾಸು ನಿಧಿ ಮತ್ತು ವಿಶ್ವಬ್ಯಾಂಕು ಇವುಗಳ ಜೊತೆ ಸಮನ್ವಯ ಸಾಧಿಸುವುದು.

25. WTO ದ ಬಹುಪಕ್ಷೀಯ ವ್ಯಾಪಾರ ಒಪ್ಪಂದಗಳನ್ನು ತಿಳಿಸಿ.

ಉತ್ತರ :

❖ 1. ಸುಂಕಗಳು ಮತ್ತು ವ್ಯಾಪಾರದ ಮೇಲಿನ ಸಾಮಾನ್ಯ ಒಪ್ಪಂದ–(GATT)

❖ 2. ಸೇವೆಗಳ ವ್ಯಾಪಾರದ ಮೇಲಿನ ಸಾಮಾನ್ಯ ಒಪ್ಪಂದ – (GATS)

❖ 3. ವ್ಯಾಪಾರಿ ಸಂಬಂಧಿ ಬೌದ್ಧಿಕ ಆಸ್ತಿಯ ಹಕ್ಕುಗಳು – (TRIPS)

❖ 4. ವ್ಯಾಪಾರಿ ಸಂಬಂಧಿ ಬಂಡವಾಳ ಹೂಡಿಕೆ ಕ್ರಮಗಳು – (TRIMS)

ಕೆಳಗಿನ ಪ್ರಶ್ನೆಗಳಿಗೆ ಸುಮಾರು 15 ವಾಕ್ಯಗಳಲ್ಲಿ ವಿವರಿಸಿ (5 ಅಂಕಗಳ ಪ್ರಶ್ನೆಗಳು)

26. **ರಫ್ತು ವ್ಯಾಪಾರದ ರಚನೆ ಮತ್ತು ದಿಕ್ಕನ್ನು ವಿವರಿಸಿ.**

ಉತ್ತರ : ***ರಫ್ತು ವ್ಯಾಪಾರದ ರಚನೆ :***

" ಭಾರತವು ವಿದೇಶಗಳಿಗೆ ಯಾವ ಯಾವ ಸರಕು–ಸೇವೆಗಳನ್ನು ಯಾವ ಪ್ರಮಾಣದಲ್ಲಿ ರಫ್ತು ಮಾಡುತ್ತಿದೆ ಎಂಬುದನ್ನು ತಿಳಿಸುವುದೇ ರಫ್ತು ರಚನೆ". ಭಾರತವು ರಫ್ತುಮಾಡುತ್ತಿರುವ ಪ್ರಮುಖ ಸರಕುಗಳೆಂದರೆ,

	2000–01	09–10
1. ಪ್ರಾಥಮಿಕ ಸರಕುಗಳು :		
* ಕೃಷಿ ಮತ್ತು ಕೃಷಿ ಸಂಬಂಧಿತ ಸರಕುಗಳು	14.0%	9.9%
* ಅದಿರು ಮತ್ತು ಖನಿಜಗಳು	2.0%	5.5%
2. ತಯಾರಿಕಾ ಸರಕುಗಳು:	79.0%	63.6%

✓ ರತ್ನಗಳು ಮತ್ತು ಆಭರಣಗಳು – 12.1%

✓ ಜವಳಿ ಮತ್ತು ಸಿದ್ಧ ಉಡುಪುಗಳು

✓ ಕರಕುಶಲ ವಸ್ತುಗಳು

✓ ಇಂಜಿನಿಯರಿಂಗ್ ಸರಕುಗಳು

✓ ರಾಸಾಯನಿಕಗಳು, ಇತ್ಯಾದಿ.

ಸೇವೆಗಳ ರಫ್ತು 2009–10 – 163.4 ಬಿ.ಡಾಲರ್

3. ಖನಿಜ ಇಂಧನ & ಮೃದುಚಾಲಕಗಳು	4.3%	17.8%
4. ಇತರೆ ಸರಕುಗಳು	0.7%	3.0%

ರಫ್ತು ದಿಕ್ಕು : "ಭಾರತವು ತನ್ನ ಸರಕು–ಸೇವೆಗಳನ್ನು ಯಾವ ಯಾವ ದೇಶಗಳಿಗೆ ಯಾವ ಯಾವ ಪ್ರಮಾಣದಲ್ಲಿ ರಫ್ತು ಮಾಡುತ್ತಿದೆ ಎಂಬುದನ್ನು ತಿಳಿಸುವುದೇ ರಫ್ತು ದಿಕ್ಕು ಎನಿಸುತ್ತದೆ". ಭಾರತವು ತನ್ನ ಸರಕು–ಸೇವೆಗಳನ್ನು ರಫ್ತು ಮಾಡುತ್ತಿರುವ ಪ್ರಮುಖ ದೇಶಗಳೆಂದರೆ,

ದೇಶಗಳು	*2009–10*
1. ಯೂರೋಪಿಯನ್ ದೇಶಗಳು(37)	21.6%
2. ಆಫ್ರಿಕನ್ ದೇಶಗಳು (49)	5.8%
3. ಅಮೇರಿಕನ್ ದೇಶಗಳು(45)	15.0%
4. ಏಷ್ಯಾ & ASEAN ದೇಶಗಳು(55)	54.0%
5. ರಷ್ಯಾ & ಬಾಲ್ಟಿಕ್ ದೇಶಗಳು(12)	0.9%
6. ಅನಿರ್ಧಿಷ್ಟ ವಲಯ	2.7%

ಈ ಮೇಲಿನ ಅಂಶಗಳ ಆಧಾರದ ಮೇಲೆ ನಿಮ್ಮ ಉತ್ತರವನ್ನು ನಿಮ್ಮದೇ ವಾಕ್ಯಗಳಲ್ಲಿ ವಿವರಿಸಿ.

27. ಭಾರತದ ಆಮದು ವ್ಯಾಪಾರದ ರಚನೆ ಮತ್ತು ಮೂಲಗಳನ್ನು ವಿವರಿಸಿ.

ಉತ್ತರ : ***ಆಮದುಗಳ ರಚನೆ :*** "ಭಾರತವು ಯಾವ ಯಾವ ಸರಕುಗಳನ್ನು ಯಾವ ಪ್ರಮಾಣದಲ್ಲಿ ಆಮದು ಮಾಡಿಕೊಳ್ಳುತ್ತಿದೆ ಎಂಬುದನ್ನು ತಿಳಿಸುವುದನ್ನೇ ಆಮದುಗಳ ರಚನೆ ಎನ್ನುತ್ತೇವೆ". ಭಾರತವು ಆಮದು ಮಾಡಿಕೊಳ್ಳುತ್ತಿರುವ ಪ್ರಮುಖ ಸರಕುಗಳೆಂದರೆ,

ಆಮದು ಸರಕುಗಳು	**2009–10**
➢ ಪೆಟ್ರೋಲಿಯಂ & ಇತರೆ ಇಂಧನಗಳು	33.2%
➢ ಆಹಾರ & ಸಂಬಂಧಿತ ಸರಕುಗಳು	3.7%
➢ ರಸಗೊಬ್ಬರಗಳು	2.3%
➢ ಬಂಡವಾಳ ಸರಕುಗಳು	15.0%
➢ ಬೆಲೆಬಾಳುವ ಹರಳುಗಳು & ಮುತ್ತುಗಳು	5.6%
➢ ಚಿನ್ನ ಮತ್ತು ಬೆಳ್ಳಿ	10.3%
➢ ಎಲೆಕ್ಟ್ರಾನಿಕ್ ಸರಕುಗಳು	7.3%
➢ ಇತರೆ ಸರಕುಗಳು	19.4%

ಆಮದಿನ ಮೂಲಗಳು : "ಭಾರತವು ಯಾವ ಯಾವ ದೇಶಗಳಿಂದ ಎಷ್ಟು ಪ್ರಮಾಣದ ಸರಕು–ಸೇವೆಗಳನ್ನು ಆಮದು ಮಾಡಿಕೊಳ್ಳುತ್ತಿದೆ ಎಂಬುದನ್ನು ತಿಳಿಸುವುದೇ ಆಮದಿನ ಮೂಲಗಳು ಎನಿಸುತ್ತದೆ". ಭಾರತದ ಪ್ರಮುಖ ಆಮದಿನ ಮೂಲಗಳೆಂದರೆ,

ದೇಶಗಳು	***2009–10***
➢ ಯೂರೋಪಿಯನ್ ದೇಶಗಳು	19.3%
➢ ಆಫ್ರಿಕನ್ ದೇಶಗಳು	7.2%
➢ ಉತ್ತರ ಅಮೆರಿಕನ್ ದೇಶಗಳು	6.6%

- ಲ್ಯಾಟಿನ್ ಅಮೆರಿಕನ್ ದೇಶಗಳು 3.6%
- ಏಷ್ಯ & ASEAN ದೇಶಗಳು 60.8%
- ರಷ್ಯಾ & ಬಾಲ್ಟಿಕ್ ದೇಶಗಳು 2.1%

ಈ ಮೇಲಿನ ಅಂಶಗಳನ್ನು ನಿಮ್ಮದೇ ವಾಕ್ಯಗಳಲ್ಲಿ ವಿವರಿಸಿ.

ಮುಂದಿನ ಪ್ರಶ್ನೆಯನ್ನು ಸುಮಾರು 40 ವಾಕ್ಯಗಳಲ್ಲಿ ವಿವರಿಸಿ (10 ಅಂಕಗಳ ಪ್ರಶ್ನೆ)

28. ರಫ್ತು ಉತ್ತೇಜನ ಮತ್ತು ಆಮದು ಉದಾರೀಕರಣ ಕ್ರಮಗಳನ್ನು ವಿವರಿಸಿ.

ಉತ್ತರ : ಭಾರತ ಸರ್ಕಾರವು 1991 ರ ನಂತರ ರಫ್ತುಗಳಿಗೆ ಉತ್ತೇಜನ ನೀಡುವುದು, ಆಮದು ಮುಕ್ತಗೊಳಿಸುವುದು, ಆ ಮೂಲಕ ಸಂದಾಯ ಬಾಕಿಯಲ್ಲಿ ಸ್ವಯಂ ಸಮತೋಲನ ವ್ಯವಸ್ಥೆಯನ್ನು ಜಾರಿಗೊಳಿಸಲು ಹಲವು ಕ್ರಮಗಳನ್ನು ಜಾರಿಮಾಡಿದೆ. ಅವುಗಳಲ್ಲಿ ಮುಖ್ಯವಾದುವುಗಳೆಂದರೆ,

- ✓ ರೂಪಾಯಿಯ ಅಪಮೌಲ್ಯ
- ✓ ರೂಪಾಯಿಯ ಪೂರ್ಣ ಪರಿವರ್ತನೀಯತೆ
- ✓ ಆಮದು ಉದಾರೀಕರಣ
- ✓ ಸುಂಕಗಳಲ್ಲಿ ಗಣನೀಯ ಕಡಿತ
- ✓ ವಿಶೇಷ ಆರ್ಥಿಕ ವಲಯಗಳ ಸ್ಥಾಪನೆ
- ✓ ರಫ್ತುದಾರರಿಗೆ ವಿಶೇಷ ಉತ್ತೇಜಕಗಳು
- ✓ ವಿದೇಶಿ ನೇರ ಹೂಡಿಕೆಗೆ ಅವಕಾಶ
- ✓ ಹಣಕಾಸು ಸಹಾಯ
- ✓ ಅಫ್ತು ಆಧ್ಯತಾ ಕ್ಷೇತ್ರಗಳಿಗೆ ವಿಶೇಷ ಪ್ರೋತ್ಸಾಹ
- ✓ ಸಮರ್ಥ ಆಮದು ಪರ್ಯಾಯತೆ
- ✓ ಗುಣಮಟ್ಟ & ಸಾಮರ್ಥ್ಯ ವೃದ್ಧಿಗೆ ಕ್ರಮ
- ✓ ಸೇವಾ ವಲಯಕ್ಕೆ ಪ್ರೋತ್ಸಾಹ
- ✓ WTO ನಿಯಮ ಪಾಲನೆ
- ✓ ಸಂಘಟಿತ ಪ್ರಯತ್ನ * ರಫ್ತು ಉತ್ತೇಜಕ ಮಂಡಳಿಗಳು
  - * ರಫ್ತು ಗೃಹಗಳು
  - * ರಫ್ತು ಸಲಹಾ ಮಂಡಳಿಗಳು
  - * ಸ್ಟಾರ್ ಗೃಹಗಳು, ಇತ್ಯಾದಿ.

(ಈ ಮೇಲಿನ ಅಂಶಗಳನ್ನು ನಿಮ್ಮದೇ ವಾಕ್ಯಗಳಲ್ಲಿ ವಿವರಿಸಿ)

ಹೀಗೆ ಭಾರತ ಸರ್ಕಾರವು ವಿದೇಶಿ ವ್ಯಾಪಾರದಲ್ಲಿ ಹಲವಾರು ಸುಧಾರಣಾ ಕ್ರಮಗಳನ್ನು ಜಾರಿಗೆ ತಂದಿದೆ. ಇದರಿಂದ ಅದರ ವಿದೇಶಿ ವ್ಯಾಪಾರದ ಪ್ರಮಾಣ ಅಗಾಧವಾಗಿ ಬೆಳೆಯುತ್ತಿದೆ. ಸಂದಾಯ ಬಾಕಿಯಲ್ಲಿ ಅಸಮತೋಲನ ಕಡಿಮೆಯಾಗುತ್ತಿದೆ. ಹಾಗೆಯೇ ವಿದೇಶಿ ವ್ಯಾಪಾರದ ಲಾಭ ಎಲ್ಲ ವರ್ಗದ ಜನರಿಗೂ ದೊರೆಯುವಂತಾಗುತ್ತಿದೆ.

ಅಧ್ಯಾಯ–9

ಆರ್ಥಿಕ ಯೋಜನೆ

ಮುಂದಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರಿಸಿ (ಒಂದು ಅಂಕದ ಪ್ರಶ್ನೆಗಳು)

1. ಆರ್ಥಿಕ ಯೋಜನೆ ಎಂದರೇನು ? **1**

ಉತ್ತರ : ಸರ್ಕಾರವು ಕೆಲವು ನಿರ್ದಿಷ್ಟ ಧ್ಯೇಯೋದ್ದೇಶಗಳೊಂದಿಗೆ, ದೇಶದಲ್ಲಿರುವ ಸಂಪನ್ಮೂಲಗಳನ್ನು ಸಮರ್ಥವಾಗಿ ಬಳಸಿಕೊಳ್ಳಲು, ಪ್ರಜ್ಞಾಪೂರ್ವಕವಾಗಿ ಮತ್ತು ವಿವೇಕಯುತವಾಗಿ ಜಾರಿಗೊಳಿಸುವ ಪ್ರಕ್ರಿಯೆಯನ್ನು ಆರ್ಥಿಕ ಯೋಜನೆ ಎನ್ನುತ್ತೇವೆ.

2. ದೇಶದಲ್ಲಿ ಪಂಚವಾರ್ಷಿಕ ಯೋಜನೆಗಳನ್ನು ತಯಾರಿಸುವ ಸಂಸ್ಥೆ ಯಾವುದು ?

ಉತ್ತರ : ರಾಷ್ಟ್ರೀಯ ಯೋಜನಾ ಆಯೋಗ

3. ರಾಷ್ಟ್ರೀಯ ಯೋಜನಾ ಆಯೋಗದ ಅಧ್ಯಕ್ಷರು ಯಾರು ?

ಉತ್ತರ : ಪ್ರಧಾನ ಮಂತ್ರಿಯವರು

4. ರಾಷ್ಟ್ರೀಯ ಯೋಜನಾ ಆಯೋಗದ ಈಗಿನ ಉಪಾಧ್ಯಕ್ಷರು ಯಾರು?

ಉತ್ತರ : ಡಾ. ಮೋಂಟೆಕ್‌ಸಿಂಗ್ ಅಹ್ಲುವಾಲಿಯಾ

5. ರಾಷ್ಟ್ರೀಯ ಅಭಿವೃದ್ಧಿ ಮಂಡಳಿಯ ಅಧ್ಯಕ್ಷರು ಯಾರು ?

ಉತ್ತರ : ಪ್ರಧಾನ ಮಂತ್ರಿಗಳು

6. ರಾಜ್ಯ ಯೋಜನಾ ಮಂಡಳಿಯ ಈಗಿನ ಉಪಾಧ್ಯಕ್ಷರು ಯಾರು ?

ಉತ್ತರ : ಶ್ರೀ. ರಾಮಚಂದ್ರ ಗೌಡರು.

7. 11 ನೇ ಪಂಚವಾರ್ಷಿಕ ಯೋಜನೆಯ ಅವಧಿಯನ್ನು ತಿಳಿಸಿ.

ಉತ್ತರ : ಏಪ್ರಿಲ್ 1, 2007 ರಿಂದ ಮಾರ್ಚಿ 31, 2012 ರ ವರೆಗೆ.

<u>ಮುಂದಿನ ಪ್ರಶ್ನೆಗಳಿಗೆ ನಾಲ್ಕೈದು ವಾಕ್ಯಗಳಲ್ಲಿ ಉತ್ತರಿಸಿ. (2 ಅಂಕಗಳ ಪ್ರಶ್ನೆಗಳು)</u>

8. 11 ನೇ ಪಂಚವಾರ್ಷಿಕ ಯೋಜನೆಯ ಯಾವುದಾದರೂ ನಾಲ್ಕು ಉದ್ದೇಶಗಳನ್ನು ತಿಳಿಸಿ.

- ❖ ವೇಗದ ಅಭಿವೃದ್ಧಿ ಮೂಲಕ ಬಡತನ ಕಡಿಮೆ ಮಾಡುವುದು, ಉದ್ಯೋಗಾವಕಾಶ ಹೆಚ್ಚಿಸುವುದು.
- ❖ ಶಿಕ್ಷಣ & ಆರೋಗ್ಯ ಸೇವೆಗಳನ್ನು ವಿಶೇಷವಾಗಿ ಬಡವರಿಗೆ ಒದಗಿಸುವುದು.
- ❖ ಶಿಕ್ಷಣ & ಕೌಶಲ್ಯ ಅಭಿವೃದ್ಧಿಯ ಮೂಲಕ ಸಬಲೀಕರಣ.

- ❖ ಉದ್ಯೋಗ ಖಾತ್ರಿ ಯೋಜನೆ ಮೂಲಕ ಉದ್ಯೋಗಾವಕಾಶ ವಿಸ್ತರಣೆ.
- ❖ ಪರಿಸರ ಸುಸ್ಥಿರತೆಯನ್ನು ಕಾಪಾಡುವುದು.
- ❖ ಲಿಂಗ ಅಸಮಾನತೆಯನ್ನು ಕಡಿಮೆಗೊಳಿಸುವುದು.
- ❖ ಆಡಳಿತವನ್ನು ಉತ್ತಮಪಡಿಸುವುದು.

9. ರಾಜ್ಯ ಯೋಜನಾ ಮಂಡಳಿಯ ನಾಲ್ಕು ಕಾರ್ಯಗಳನ್ನು ತಿಳಿಸಿ

- ✓ ರಾಜ್ಯಮಟ್ಟದಲ್ಲಿ ಆರ್ಥಿಕ ಯೋಜನೆಗಳನ್ನು ತಯಾರಿಸುವುದು.
- ✓ ರಾಜ್ಯದಲ್ಲಿ ಆರ್ಥಿಕಾಭಿವೃದ್ಧಿಯ ಅಡೆತಡೆಗಳನ್ನು ನಿವಾರಿಸುವುದು.
- ✓ ಜಿಲ್ಲಾ ಮಟ್ಟದ ಯೋಜನಾ ಸಮಿತಿಗಳ ನಡುವೆ ಸಮನ್ವಯ ಸಾಧಿಸುವುದು.
- ✓ ರಾಜ್ಯದಲ್ಲಿನ ಆರ್ಥಿಕ ಯೋಜನೆಗಳ ಉಸ್ತುವಾರಿ ನೋಡಿಕೊಳ್ಳುವುದು.

<u>ಮುಂದಿನ ಪ್ರಶ್ನೆಗಳಿಗೆ ಸುಮಾರು 15 ವಾಕ್ಯಗಳಲ್ಲಿ ಉತ್ತರಿಸಿ. (5 ಅಂಕಗಳ ಪ್ರಶ್ನೆಗಳು)</u>

10. ರಾಷ್ಟ್ರೀಯ ಯೋಜನಾ ಆಯೋಗದ ರಚನೆ ಮತ್ತು ಕಾರ್ಯಗಳನ್ನು ವಿವರಿಸಿ.

ಉತ್ತರ : ರಚನೆ : 1950 ರಲ್ಲಿ ರಾಷ್ಟ್ರೀಯ ಯೋಜನಾ ಆಯೋಗವನ್ನು ರಚಿಸಲಾಗಿದೆ. ಇದು ಒಂದು ಬಹುಸದಸ್ಯ ಸಂಸ್ಥೆಯಾಗಿದೆ. ಇದು 5 ಜನ ಪೂರ್ಣಾವಧಿ ಮತ್ತು ಕೆಲವು ಅಲ್ಪಾವಧಿ ಸದಸ್ಯರನ್ನು ಹೊಂದಿದೆ. ಇವರು ಆರ್ಥಿಕ, ವೈಜ್ಞಾನಿಕ ಹಾಗೂ ತಾಂತ್ರಿಕ ಕ್ಷೇತ್ರಗಳಲ್ಲಿ ಪರಿಣತರಾಗಿರುತ್ತಾರೆ. ಪ್ರಧಾನ ಮಂತ್ರಿಯವರು ಇದರ ಅಧ್ಯಕ್ಷರಾಗಿರುತ್ತಾರೆ. ಉಪಾಧ್ಯಕ್ಷರು ಕಾಲಕಾಲಕ್ಕೆ ಸರ್ಕಾರದಿಂದ ನೇಮಿಸಲ್ಪಡುತ್ತಾರೆ. ಸದ್ಯದಲ್ಲಿ ಡಾ. ಮೋಂಟೆಕ್‌ಸಿಂಗ್ ಅಹ್ಲುವಾಲಿಯಾ ಇದರ ಉಪಾಧ್ಯಕ್ಷರಾಗಿದ್ದಾರೆ. ಇದು ಹಲವು ವಿಭಾಗಗಳ ಮೂಲಕ ಕಾರ್ಯನಿರ್ವಹಿಸುತ್ತದೆ.

ಕಾರ್ಯಗಳು :

1. ದೇಶದ ಸಂಪನ್ಮೂಲಗಳನ್ನು ಅಂದಾಜುಮಾಡುವುದು, ಅವುಗಳನ್ನು ಅಭಿವೃದ್ಧಿಪಡಿಸುವ ಬಗ್ಗೆ ಸಲಹೆ ನೀಡುವುದು.
2. ಸಂಪನ್ಮೂಲಗಳನ್ನು ಸರಿಯಾಗಿ ಮತ್ತು ಪರಿಣಾಮಕಾರಿಯಾಗಿ ಬಳಸಿಕೊಳ್ಳಲು ಯೋಜನೆಗಳನ್ನು ತಯಾರಿಸುವುದು.
3. ಆರ್ಥಿಕಾಭಿವೃದ್ಧಿಗೆ ಉಂಟಾಗಬಹುದಾದ ಅಡಚಣೆಗಳನ್ನು ಗುರುತಿಸಿ, ನಿವಾರಿಸುವುದು.
4. ಯೋಜನೆಯ ಜಾರಿಗಾಗಿ ಅಗತ್ಯ ಸಂಘಟನೆಯ ಸ್ವರೂಪವನ್ನು ನಿರ್ಣಯಿಸುವುದು.
5. ಯೋಜನೆಗಳ ಉಸ್ತುವಾರಿ ನೋಡಿಕೊಳ್ಳುವುದು ಮತ್ತು ಕಾಲ ಕಾಲಕ್ಕೆ ಸಲಹೆ ಸೂಚನೆಗಳನ್ನು ನೀಡುವುದು.
6. ಯೋಜನೆಗಳನ್ನು ಕಾರ್ಯಗತ ಮಾಡುವಲ್ಲಿ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳಿಗೆ ಉಂಟಾಗುವ ಸಮಸ್ಯೆ ಪರಿಹರಿಸುವುದು.

11. ರಾಷ್ಟ್ರೀಯ ಅಭಿವೃದ್ಧಿ ಮಂಡಳಿಯ ರಚನೆ ಮತ್ತು ಕಾರ್ಯಗಳನ್ನು ತಿಳಿಸಿ.

ಉತ್ತರ : ರಚನೆ : ರಾಷ್ಟ್ರೀಯ ಯೋಜನಾ ಆಯೋಗ ಮತ್ತು ರಾಜ್ಯಗಳ ನಡುವೆ ನಿಕಟ ಸಹಕಾರ ಹೊಂದಲು ರಾಷ್ಟ್ರೀಯ ಅಭಿವೃದ್ಧಿ ಮಂಡಳಿಯನ್ನು 1952 ರಲ್ಲಿ ಸ್ಥಾಪನೆ. ಎಲ್ಲ ರಾಜ್ಯಗಳ ಮುಖ್ಯಮಂತ್ರಿಗಳು ಮತ್ತು ಯೋಜನಾ ಆಯೋಗದ ಸದಸ್ಯರುಗಳಿಂದ ರಚಿಸಲ್ಪಟ್ಟಿದೆ. ಇದರ ಸಭೆಗಳಲ್ಲಿ ಕೇಂದ್ರ ಸರ್ಕಾರದ ಮಂತ್ರಿಗಳೂ ಭಾಗವಹಿಸುತ್ತಾರೆ. ಇದರ ಅಧ್ಯಕ್ಷತೆಯನ್ನು ಪ್ರಧಾನ ಮಂತ್ರಿಯವರು ವಹಿಸುತ್ತಾರೆ. ಇದು ಒಂದು ಸಲಹಾ ಮಂಡಳಿಯಾಗಿದ್ದು, ಪಂಚವಾರ್ಷಿಕ ಯೋಜನೆಗೆ ಅನುಮೋದನೆ ನೀಡುವ ಅವಧಿಯಲ್ಲಿ ಮಾತ್ರ ಕೇವಲ ಎರಡು ಬಾರಿ ಸಭೆ ಸೇರುತ್ತದೆ.

ಕಾರ್ಯಗಳು :

ಪಂಚವಾರ್ಷಿಕ ಯೋಜನೆಗಳಿಗೆ ಅನುಮೋದನೆ ನೀಡುವುದು ಇದರ ಬಹುಮುಖ್ಯ ಕಾರ್ಯ. ಅದಕ್ಕೆ ಪೂರಕವಾಗಿ ನಿರ್ವಹಿಸುವ ಕಾರ್ಯಗಳೆಂದರೆ,

1. ಯೋಜನೆಯ ಕಾರ್ಯನಿರ್ವಹಣೆಯನ್ನು ಸಮೀಕ್ಷೆ ಮಾಡುವುದು.
2. ಸಾಮಾಜಿಕ ಮತ್ತು ಆರ್ಥಿಕ ನೀತಿಗಳನ್ನು ಪರ್ಯಾಲೋಚಿಸುವುದು.
3. ಯೋಜನೆಯ ಗುರಿಗಳನ್ನು ಸಾಧಿಸುವ ಮಾರ್ಗಗಳನ್ನು ಸೂಚಿಸುವುದು.
4. ಜನರ ಪಾಲ್ಗೊಳ್ಳುವಿಕೆ ಮತ್ತು ಸಹಕಾರವನ್ನು ಗಳಿಸುವುದು.
5. ಆಡಳಿತಾತ್ಮಕ ಸೇವೆಗಳನ್ನು ಸುಧಾರಿಸುವುದು.
6. ನ್ಯಾಯಯುತ ಹಂಚಿಕೆಯ ಭರವಸೆ ಕೊಡುವುದು.
7. ಅಭಿವೃದ್ಧಿಯಲ್ಲಿ ಪ್ರಾದೇಶಿಕ ಸಮತೋಲನವನ್ನು ಕಾಯ್ದುಕೊಳ್ಳುವುದು.
8. ಅಭಿವೃದ್ಧಿಗಾಗಿ ಸಂಪನ್ಮೂಲಗಳನ್ನು ನಿರ್ಮಿಸುವುದು.

12. 10 ನೇ ಪಂಚವಾರ್ಷಿಕ ಯೋಜನೆಯ ಉದ್ದೇಶಗಳು ಮತ್ತು ಸಾಧನೆಗಳನ್ನು ಗುರುತಿಸಿ.

ಉದ್ದೇಶಗಳು : *ಭಾರತವನ್ನುಅತ್ಯಂತ ವೇಗದ ಬೆಳವಣಿಗೆ ಹೊಂದುವ ಅರ್ಥವ್ಯವಸ್ಥೆಯನ್ನಾಗಿ ಮಾರ್ಪಡಿಸುವ ಗುರಿ ಹೊಂದಲಾಗಿತ್ತು. ಈ ಯೋಜನೆಯ ಬಹುಮುಖ್ಯ ಉದ್ದೇಶಗಳೆಂದರೆ,*

1. 2002–07 ರ ಅವಧಿಯಲ್ಲಿ ವಾರ್ಷಿಕ ಸರಾಸರಿ ಶೇ.8 ರಷ್ಟು ಜಿ.ಡಿ.ಪಿ ಬೆಳವಣಿಗೆಯನ್ನು ಸಾಧಿಸುವುದು.
2. ಮುಂದಿನ 10 ವರ್ಷಗಳಲ್ಲಿ ತಲಾದಾಯವನ್ನು ದ್ವಿಗುಣಗೊಳಿಸುವುದು.
3. ಜೀವನದ ಗುಣಮಟ್ಟ ಸೂಚಿ ಮತ್ತು ಮಾನವ ಅಭಿವೃದ್ಧಿ ಸೂಚಿಗಳನ್ನು ಸುಧಾರಿಸುವುದು.
4. ಜನಸಂಖ್ಯಾ ಬೆಳವಣಿಗೆ ದರವನ್ನು ಶೇ.1.6 ಕ್ಕೆ ನಿಯಂತ್ರಿಸುವುದು.

ಸಾಧನೆಗಳು : ಹತ್ತನೇ ಯೋಜನೆಯ ಬಹುಮುಖ್ಯ ಸಾಧನೆಗಳೆಂದರೆ,

- 10 ನೇ ಯೋಜನೆಯ ಅವಧಿಯಲ್ಲಿ GDPಯ ವಾರ್ಷಿಕ ಸರಾಸರಿ ಬೆಳವಣಿಗೆ ದರ ಶೇ.7.7 ರಷ್ಟಾಯಿತು.
- ಉಳಿತಾಯ ಮತ್ತು ಬಂಡವಾಳ ಹೂಡಿಕೆ ಕ್ರಮವಾಗಿ ಶೇ.35.7 ಮತ್ತು ಶೇ.36.9 ಕ್ಕೆ ಹೆಚ್ಚಳ.
- ಬಡತನ ಪ್ರಮಾಣ 2004–05 ರ ವೇಳೆಗೆ ಶೇ.21.8 ಕ್ಕೆ ಇಳಿತ.
- ಸರ್ಕಾರದ ವಿತ್ತೀಯ ಕೊರತೆ ಶೇ.3.7 ಕ್ಕೆ ಇಳಿಕೆ.
- ಬೆಲೆಗಳಲ್ಲಿ ಸ್ಥಿರತೆ ಸಾಧನೆ. ಹಣದುಬ್ಬರ ದರ ಸರಾಸರಿ ಶೇ.4.93 ಕ್ಕೆ ನಿಯಂತ್ರಣ.
- 2006–07ರಲ್ಲಿ ರಫ್ತು ಶೇ.22.6, ಆಮದು ಶೇ.21.4 ರ ದರದಲ್ಲಿ ಹೆಚ್ಚಳ
- ವಿದೇಶಿ ವಿನಿಮಯ ಸಂಗ್ರಹ ಫೆಬ್ರವರಿ 2007ಕ್ಕೆ 185 ಬಿ.ಡಾಲರ್ ಹೆಚ್ಚಳ

THE END